# ಸಿಎಂ ವಿರುದ್ಧ ಪ್ರಕಾಶ ಹುಕ್ಕೇರಿ ಅಸಮಾಧಾನ

ಬೆಳಗಾವಿ–:ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮುನಿಸಿಕೊಂಡ್ರಾ ಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ ಸಿದ್ದರಾಮಯ್ಯ ಈ ಹಿಂದೆ ನನಗೆ ಕೊಟ್ಟ ಭರವಸೆ ಈಡೇರಿಸಿಲ್ಲ ಎಂದು ಹುಕ್ಕೇರಿ ಅಸಮಾಧಾನ ಬೆಳಗಾವಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಸಿಎಂ ವಿರುದ್ಧ ಪ್ರಕಾಶ ಹುಕ್ಕೇರಿ ಅಸಮಾಧಾನ 2013ರಲ್ಲಿ ನಾನು ಇದೇ ಸಿದ್ದರಾಮಯ್ಯ ಸಂಪುಟದಲ್ಲಿ ಕೃಷಿ ಸಚಿವನಾಗಿದ್ದೆ



2014ರಲ್ಲಿ ಸಿದ್ದರಾಮಯ್ಯ ನನಗೆ ಚಿಕ್ಕೋಡಿ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಲು ಸೂಚಿಸಿದ್ರು ತಾವು ಲೋಕಸಭೆ ಚುನಾವಣೆಯಲ್ಲಿ ಗೆದ್ದರೆ ಪುತ್ರ ಗಣೇಶಗೆ ವಿಧಾನಸಭೆ ಟಿಕೆಟ್ ಕೊಡುವುದಾಗಿ ಹೇಳಿದ್ದರು.ಉಪಚುನಾವಣೆಯಲ್ಲಿ ಗಣೇಶ ಗೆದ್ದ ಬಳಿಕ ಮಂತ್ರಿ ಸ್ಥಾನ ನೀಡುವುದಾಗಿಯೂ ಅಂದು ಸಿದ್ದರಾಮಯ್ಯ ಭರವಸೆ ನೀಡಿದ್ದರು.ಪುತ್ರ ಗಣೇಶ ಹುಕ್ಕೇರಿ ಉಪಚುನಾವಣೆಯಲ್ಲಿ ಭರ್ಜರಿ ಗೆಲುವು ದಾಖಲಿಸಿದ್ದರೂ ಮಂತ್ರಿ ಮಾಡಲಿಲ್ಲ ಬಳಿಕ ಬಂದ ಕಾಂಗ್ರೆಸ್– ಜೆಡಿಎಸ್ ಮೈತ್ರಿ ಸರ್ಕಾರದಲ್ಲೂ ಪುತ್ರನಿಗೆ ಸಚಿವ ಸ್ಥಾನ ನೀಡಲಿಲ್ಲ.2023 ರಲ್ಲಿ 78 ಸಾವಿರ ಮತಗಳ ಅಂತರದಿಂದ ಗೆದ್ದ ಗಣೇಶಗೆ ಈ ಸಲವೂ ಮಂತ್ರಿ ಸ್ಥಾನ ನೀಡಲಿಲ್ಲಮಗನಿಗೆ ಮಂತ್ರಿ ಸ್ಥಾನ ನೀಡುವಂತೆ ನಾವೂ ಕೇಳಿಲ್ಲ,

ಆದರೆ ನಮ್ಮ ವಿಚಾರದಲ್ಲಿ ಸಿಎಂ ನುಡಿದಂತೆ ನಡೆದಿಲ್ಲ.ಅಂದು ಸಿದ್ದರಾಮಯ್ಯ ಸೂಚಿಸಿದಕ್ಕೆ ನಾನು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಲೋಕಸಭೆಗೆ ಸ್ಪರ್ಧಿಸಿ ಗೆದ್ದಿದ್ದೆ.2022ರ ಶಿಕ್ಷಕರ ಪರಿಷತ್ ಚುನಾವಣೆಗೆ ಕಾಂಗ್ರೆಸ್ ಟಿಕೆಟ್ ಕೇಳಿದಾಗಲೂ ಸಿದ್ದರಾಮಯ್ಯ ಸ್ಪಂದಿಸಲಿಲ್ಲ.

ಬಳಿಕ ಪುತ್ರ ಗಣೇಶ ಹುಕ್ಕೇರಿ ರಣದೀಪ್‌ಸಿಂಗ್ ಸುರ್ಜೆವಾಲಾ ಭೇಟಿ ಆಗಿ ಟಿಕೆಟ್ ನೀಡಲು ಮನವಿ ಮಾಡಿದ್ದರು ಆಗ ಡಿಕೆಶಿ ನನ್ನ ಅಭಿಪ್ರಾಯ ಕೇಳಿಯೇ ಶಿಕ್ಷಕರ ಕ್ಷೇತ್ರಕ್ಕೆ ನನ್ನ ಹೆಸರನ್ನು ಹೈಕಮಾಂಡ್‌ಗೆ ರವಾನಿಸಿದ್ದರು.ನಾನು 15 ಸಾವಿರ ಮತಗಳ ಅಂತರದಿಂದ ಗೆದ್ದು, ಶಿಕ್ಷಕರ ಸೇವೆ ಮಾಡುತ್ತಿದ್ದೇನೆ.ಈಗ ಮತ್ತೇ ಲೋಕಸಭೆ ಚುನಾವಣೆಗೆ ಸ್ಪರ್ಧಿಸುವಂತೆ ಸಿಎಂ ಸಿದ್ದರಾಮಯ್ಯ ಹೇಳ್ತಿದ್ದಾರೆ.

ಕಾಂಗ್ರೆಸ್ ನಾಯಕರು ಹೇಳಿದಂತೆ ಕೇಳಲು ನಾನು ಫುಟ್ಬಾಲ್ ಅಲ್ಲ ಎಂದ ಪ್ರಕಾಶ ಹುಕ್ಕೇರಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸಲ್ಲ ಎಂದು ಹೈಕಮಾಂಡ್‌ಗೆ ಗಟ್ಟಿ ಸಂದೇಶ ರವಾನಿಸಿದ ಹುಕ್ಕೇರಿ ವಯಸ್ಸಿನ ಕಾರಣ, ಇನ್ನೂ 4 ವರ್ಷ ಪರಿಷತ್ ಅವಧಿ ಇರುವ ಕಾರಣಕ್ಕೆ ಸ್ಪರ್ಧಿಸಲ್ಲ.

ಈ ಸಲ ಚಿಕ್ಕೋಡಿ ಕ್ಷೇತ್ರದಿಂದ ನಾನಾಗಲಿ, ನನ್ನ ಮಗ ಗಣೇಶ ಆಗಲಿ ಸ್ಪರ್ಧಿಸಲ್ಲ ಚಿಕ್ಕೋಡಿಯಲ್ಲಿ ಈ ಸಲ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಪೂರಕ ವಾತಾವರಣ ಇದೆ. ಅಹಿಂದ ವರ್ಗದ ಯಾರಿಗೆ ಟಿಕೆಟ್ ನೀಡಿದರೂ ಕಾಂಗ್ರೆಸ್ ಅಭ್ಯರ್ಥಿ ಗೆಲುವು ನಿಶ್ಚಿತ ಆದರೆ ನನಗೆ ಸ್ಪರ್ಧಿಸಿ ಎಂದು ಒತ್ತಡ ಹೇರಬೇಡಿ ಎಂದು ಪ್ರಕಾಶ ಹುಕ್ಕೇರಿ ಹೈಕಮಾಂಡ್‌ಗೆ ಮನವಿ

# ಬದುಕಿಗೆ ಬಣ್ಣ ತುಂಬುವವಳೆ ಹೆಣ್ಣು : ನೀಲಗಂಗಾ ಚರಂತಿಮಠ




ಬೆಳಗಾವಿ :– ಅಜ್ಜಿ, ಅವ್ವ, ಅತ್ತಿಗೆ, ಮಡದಿ, ಮಗಳು ಹೀಗೆ ಹೆಣ್ಣು ಮನುಷ್ಯನ ಜೀವನದಲ್ಲಿ ಕಾಣಿಸಿಕೊಂಡು ಅತ್ಯಂತ ಪ್ರಮುಖ ಸ್ಥಾನ ವಹಿಸುತ್ತಾಳೆ. ಕಣ್ಣಿಗೆ ಕಾಣುವ ದೇವರೇ ತಾಯಿ ಎಂದು ಹೇಳುತ್ತಾರೆ. ಹೀಗೆ ಬದುಕಿಗೆ ಬಣ್ಣ ತುಂಬುವವಳೇ ಹೆಣ್ಣು ಎಂದು ಹಿರಿಯ ಲೇಖಕಿ ಶ್ರೀಮತಿ ನೀಲಗಂಗಾ ಚರಂತಿಮಠ ಅವರು ಇಂದಿಲ್ಲಿ ಹೇಳದರು.

ನಗರದ ಹಾಸ್ಯಕೂಟ ಮತ್ತು ಕನ್ನಡ ಸಾಹಿತ್ಯ ಭವನ ವಿಶ್ವಸ್ತ ಮಂಡಳಿ ಸಂಯುಕ್ತ ಆಶ್ರಯದಲ್ಲಿ ನನ್ನೆ ದಿ. 9 ಶನವಾರದಂದು ಚೆನ್ನಮ್ಮ ವೃತ್ತದ ಬಳಿಯಿರುವ ಕನ್ನಡ ಸಾಹಿತ್ಯ ಭವನದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನ ನಿಮಿತ್ತ ವಿಶೇಷ ಕಾರ್ಯಕ್ರಮ 'ಸಿಹಿ – ಕಹಿ ನೆನಪು ಸಾವಿರ ನೆನಪು' ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿದ್ದರು ಅಧ್ಯಕ್ಷತೆಯನ್ನು ವಹಿಸಿದ್ದ ಹಿರಿಯ ಲೇಖಕಿ ಶ್ರೀಮತಿ ಚರಂತಿಮಠ ಮೇಲಿನಂತೆ ಅಭಿಪ್ರಾಯ ಪಟ್ಟರು.

ಮುಂದೆ ಮಾತನಾಡುತ್ತ ಶ್ರೀಮತಿ ಚರಂತಿಮಠ, ಅನ್ನಕ್ಕಾಗಿ ದುಡಿಯುವವರಿಗೆ ಮರ್ಯಾದೆ ಕೊಡುತ್ತಿರುವ ಸಮಾಜ ಅನ್ನ ಮಾಡುವವಳಿಗೆ ಗೌರವವಿಲ್ಲ. ಪ್ರತಿಭೇಯಿರುವ ಹೆಣ್ಣು ಮಕ್ಕಳು ಸಾಕಷ್ಟು ಇದ್ದಾರೆ ಆದರೆ ಅವರಿಗೆ ಸಿಗಬೇಕಾದ ಅವಕಾಶಗಳು ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.ಈ ಕಾರ್ಯಕ್ರದಲ್ಲಿ ಎರಡು ಸುತ್ತುಗಳಿದ್ದು ಮೊದಲು ಸುತ್ತಿನಲ್ಲಿ ಕಹಿ ನೆನಪುಗಳನ್ನು ಹಂಚಿಕೊಂಡ ಶ್ರೀಮತಿ ಸುನತಾ ದೇಸಾಯಿ, ಶ್ರೀಮತಿ ಕೀರ್ತಿ ಕಾಸರಗೋಡ, ಶ್ರೀಮತಿ ಸುಪ್ರಿಯಾ ದೇಶಪಾಂಡೆ, ಶ್ರೀಮತಿ ದೀಪಿಕಾ ಕುಲಕರ್ಣಿ, ಶ್ರೀಮತಿ ಭಾರತಿ ವಡವಿ ಇವರು ತಂದೆ–ತಾಯಿ, ಅತ್ತೆ–ಮಾವ, ಪತಿ–ಪತ್ನಿ ಹೀಗೆ ಮುಂತಾದವರ ಸಾವಿನ ಘಟನೆಗಳನ್ನೇ ಹಂಚಿಕೊಂಡರು. ಸಾವಿನ ಸುತ್ತಲೇ ಮೊದಲ ಸುತ್ತು ವರೆದಿತ್ತು. ತುಂಬ ಭಾವುಕರಾದ ಎಲ್ಲರ ಕಣ್ಣುಗಳು ತೇವಗೊಂಡವು. ಎರಡನೇ ಸುತ್ತಾದ ಸಿಹಿ ಸಂದರ್ಭಗಳನ್ನು ಹಂಚಿಕೊಳ್ಳುವಾಗ ಮೊದಲಿನ ನೋವಿನ ಪ್ರಸಂಗಗಳಿಂದ ಹೊರಬಂದು ವೇದಿಕೆ ಸಹಜ ಸ್ಥಿತಿಗೆ ಮರಳಿತು.

ಕಾರ್ಯಕ್ರಮದ ಪ್ರಾಯೋಜಕತ್ವವನ್ನು ವಹಿಸಿಕೊಂಡಿದ್ದ ಬಿ.ಎಸ್.ಎನ್.ಎಲ್. ನವೃತ್ತ ಅಧಿಕಾರಿ ಎಸ್ ವಿ ದೀಕ್ಷೀತ ಅವರು ಮಾತನಾಡುತ್ತ ನನ್ನ ಮಡದಿ ವಿಜಯಲಕ್ಷ್ಮಿ ಪ್ರತಿವರ್ಷ ಈ ತಿಂಗಳ ಪ್ರಾಯೋಜಕತ್ವವನ್ನು ವಹಿಸಿಕೊಳ್ಳತ್ತ ಬಂದಿದ್ದಳು. ಅವಳ ನಿಧನದ ನಂತರ ನಾನು ಮುಂದೆವರೆಸಿಕೊಂಡು ಬಂದಿದ್ದೇನೆ. ಅವಳು ನನ್ನನ್ನು ಅಗಲಿದ ದಿನ ನನಗೆ ಅತ್ಯಂತ ಕಹಿ ದಿನವಾಗಿದೆ ಎಂತು ಕಣ್ಣದುಂಬಿ ಹೇಳಿದರು. ಗುಂಡೇನಟ್ಟಿ ಮಧುಕರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀಮತಿ ರಾಜೇಶ್ವರಿ ಹಿರೇಮಠ ನಿರೂಪಿಸಿದರು.

# ಶಿಕ್ಷಕ ಸಾಹಿತಿ ವೈ.ಬಿ.ಕಡಕೋಳ ನಮ್ಮ ನಡುವಿನ ಓರ್ವ ಸೃಜನಶೀಲ ಬರಹಗಾರ : ಆಶಾ ಫರೀಟ್




ಯರಗಟ್ಟಿ : "ಶಿಕ್ಷಕ ಸಾಹಿತಿ ವೈ.ಬಿ.ಕಡಕೋಳ ಅವರ ಬರವಣಿಗೆ ನಮ್ಮ ನಡುವಿರುವ ಎಲೆಮರೆಯ ಕಾಯಿಯಂತಿರುವ ಅನೇಕ ಪ್ರತಿಭೆಗಳನ್ನು ಪರಿಚಯಿಸುವ ಬಲ್ಲವರ ಬಳಗ ಹಾಗೂ ಮರೆಯಲಾಗದ ಮಹನೀಯರ ಕುರಿತು ಹವಳದ ರಾಶಿ ಎಂಬ ಎರಡು ಕೃತಿಗಳ ಮೂಲಕ ಏಣಗಿ ಬಾಳಪ್ಪ.ಹುಕ್ಕೇರಿ ಬಾಳಪ್ಪ.ಬಿದರಿ ಕುಮಾರ ಶಿವಯೋಗಿಗಳು.ಸಿದ್ದೇಶ್ವರ ಪೂಜ್ಯರಂತಹ ಮಹನೀಯರನ್ನು ತಮ್ಮ ಬರಹಗಳ ಮೂಲಕ ಪರಿಚಯಿಸುವ ಕಾರ್ಯವನ್ನು ಮಾಡಿರುವರು.ಇವರು ಸವದತ್ತಿ ತಾಲೂಕಿನ ಹೆಮ್ಮೆಯ ಶಿಕ್ಷಕ ಸಾಹಿತಿ.ನಮ್ಮ ನಡುವೆ ಇರುವ ಸೃಜನಶೀಲ ಬರಹಗಾರರು.ಬಿಡುವಿರದ ಚಟುವಟಿಕೆಗಳ ನಡುವೆಯೂ ಕ್ರಿಯಾತ್ಮಕ ಬರವಣಿಗೆ ಹವ್ಯಾಸದ ಮೂಲಕ ತಮ್ಮದೇ ಆದ ಸಾಹಿತ್ಯಲೋಕವನ್ನು ನಮಗೆ ನೀಡುತ್ತಿರುವ ನಮಗೆಲ್ಲ ಮಾರ್ಗದರ್ಶಕರು"ಎಂದು ಯರಗಟ್ಟಿ ತಾಲೂಕಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರ ವಸತಿ ನಿಲಯದ ಮೇಲ್ವಿಚಾರಕಿ ಹಾಗೂ ಯರಗಟ್ಟಿ ತಾಲೂಕ ಅಖಿಲ ಕರ್ನಾಟಕ ಸಾಂಸ್ಕೃತಿಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಆಶಾ ಫರೀಟ ತಿಳಿಸಿದರು.

ಅವರು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಂಗಣದಲ್ಲಿ ಜರುಗಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ.ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸೇವೆ ಸಲ್ಲಿಸುತ್ತಿರುವ ಮಹಿಳೆಯರಿಗೆ ವನಿತಾ ಪ್ರಶಸ್ತಿ.ಅತ್ಯುತ್ತಮ ಮಹಿಳಾ ಮಂಡಳಗಳಿಗೆ ಪ್ರಶಸ್ತಿ ಮತ್ತು ಶಿಕ್ಷಕ ಸಾಹಿತಿ ವೈ.ಬಿ.ಕಡಕೋಳ ಅವರ ಬಲ್ಲವರ ಬಳಗ ಮತ್ತು ಹವಳದ ರಾಶಿ ಕೃತಿ ಲೋಕಾರ್ಪಣೆ ಸಮಾರಂಭದಲ್ಲಿ ಕೃತಿಗಳ ಅನಾವರಣ ನೆರವೇರಿಸಿ ಮಾತನಾಡಿದರು. ವೈ.ಬಿ.ಕಡಕೋಳ ತಮ್ಮ ಎರಡು ಕೃತಿಗಳು ಮೂಡಿ ಬಂದ ಕುರಿತು ಮಾತನಾಡಿದರು.ಈ ಸಂದರ್ಭದಲ್ಲಿ ಬಲ್ಲವರ ಬಳಗ ಹಾಗೂ ಹವಳದ ರಾಶಿ ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಭಾರತ ಜ್ಞಾನ ವಿಜ್ಞಾನ ಸಮೀತಿಯ ಎಂ.ಆರ್.ಕಬ್ಬೇರ.ತಲ್ಲೂರ.ಮಂಜುನಾಥ ಪವಾಡಿ. ಡಾ. ವೀಣಾ. ಆಶಾಬೇಗಂ ಮುನವಳ್ಳಿ .ಡಾ.ಶೈಲಜಾ.ಎಲ್.ಐ.ಲಕ್ಕಮ್ಮನವರ.ಚಂದ್ರಶೇಖರ್ ಮಾಡಲಗೇರಿ ಮೊದಲಾದವರು ಮಹಿಳಾ ದಿನಾಚರಣೆ ಕುರಿತು ಮಾತನಾಡಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಚೇತನ ಪೌಂಡೇಶನ್ ಅಧ್ಯಕ್ಷರಾದ ಚಂದ್ರಶೇಖರ ಮಾಡಲಗೇರಿ ತಮ್ಮ ಸಂಸ್ಥೆಯಿಂದ ಕಳೆದ ಹತ್ತು ವರ್ಷಗಳಲ್ಲಿ ಸಾಹಿತ್ಯ ಕಲೆ ರಂಗಭೂಮಿ ಸಿನಿಮಾ ಕಿರುತೆರೆ ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಮಾಡುತ್ತ ಬಂದಿದ್ದು ಇಂದು ತಮ್ಮ ಸಂಸ್ಥೆಯ ಎರಡನೂರ ಇಪ್ಪತ್ತನೆಯ ಕಾರ್ಯಕ್ರಮ ಜರುಗುತ್ತಿರುವುದನ್ನು ತಮ್ಮ ಎಲ್ಲ ಕಾರ್ಯಕ್ರಮಗಳ ರೂಪರೇಷೆಗಳನ್ನು ತಿಳಿಸುತ್ತ ನುಡಿದರು.

ಶಿಕ್ಷಕ ಸಂಘಟಕ ಎಲ್.ಐ.ಲಕ್ಕಮ್ಮನವರ ಮಾತನಾಡಿ "ಅಪ್ನಾದೇಶ ಸಂಘಟನೆ ಹತ್ತು ವರ್ಷಗಳ ಹಿಂದೆ ಅಂದಿನ ಐಎಎಸ್ ಅಧಿಕಾರಿ ಭರತಲಾಲ್ ಮೀನಾ ಅವರ ಮೂಲಕ ಧಾರವಾಡದಲ್ಲಿ ಹುಟ್ಟಿತು.ಇಂದು ಕರ್ನಾಟಕ ರಾಜ್ಯದಾದ್ಯಂತ ಈ ಸಂಘಟನೆ ಇವೆ.ಧಾರವಾಡ ಸಂಘಟನೆಯ ಪದಾಧಿಕಾರಿಗಳು ರಾಜ್ಯದ ವಿವಿಧ ಭಾಗದಲ್ಲಿ ಇರುವರು.ಅವರ ಮೂಲಕ ಮುಂದಿನ ದಿನಗಳಲ್ಲಿ ರಚನಾತ್ಮಕ ಕಾರ್ಯಗಳು ಜರಗುತ್ತವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶೋಭಾ ಗಾಣಿಗೇರ.ಸುಜಾತಾ ಗಾಂವಕರ.ಜಯಶ್ರೀ ಬೆರಗುಡ.ರತ್ನಾ ಹಾದಿಮನಿ.ರೇಣುಕಾ ಬಂದಮ ಇವರಿಗೆ ಅಂತರಾಷ್ಟ್ರೀಯ ವನಿತಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಧಾರವಾಡದ ಕುಮಾರೇಶ್ವರ ನಗರ ಮಿಹಿಳಾ ಮಂಡಳ.ಬೆಂಗಳೂರಿನ ಕರ್ನಾಟಕ ರಾಜ್ಯ ಮಹಿಳಾ ನೌಕರರ ಸಂಘ.ಉಪ್ಪಿನ ಬೆಟಗೇರಿಯ ಲವಣಗಿರಿ ಮಹಿಳಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘಗಳ ಪದಾಧಿಕಾರಿಗಳಿಗೆ ಉತ್ತಮ ಸಂಘಟನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಿವೃತ್ತ ಶಿಕ್ಷಕಿ ಪ್ರಮಿಳಾ ಜಕ್ಕನ್ನವರ ಸ್ವಾಗತಿಸಿದರು.ಆರ್.ಎಂ.ಕುರ್ಲಿ ನಿರೂಪಿಸಿದರು.ಚನಬಸು. ಲಗಮನ್ನವರ ವಂದಿಸಿದರು.

# ಮಹಿಳೆಯರು ಆರೋಗ್ಯದ ಕಡೆಗೆ ಹೆಚ್ಚು ಗಮನ ನೀಡಬೇಕು : ಡಾ. ತೇಜಸ್ವಿನ ಹಿರೇಮಠ

ಗದಗ : ಮಹಿಳೆ ತನ್ನ ಕುಟುಂಬದ ನಿರ್ವಹಣೆಯಲ್ಲಿ ತನ್ನ ವೈಯಕ್ತಿಕ ಆರೋಗ್ಯದ ಕಡೆಗೆ ನಿರ್ಲಕ್ಷ ವಹಿಸುತ್ತಾಳೆ. ಇದರಿಂದ ಆಕೆ ಮುಂಬರುವ ದಿನಗಳಲ್ಲಿ ಅನೇಕ ರೋಗಗಳಿಗೆ ತುತ್ತಾಗುತ್ತಾಳೆ. ಆದ್ದರಿಂದ ಮಹಿಳೆ ತನ್ನ ಆರೋಗ್ಯದ ಕಡೆಗೆ ಗಮನಹರಿಸಿದಲ್ಲಿ ತನ್ನ ಕುಟುಂಬವೂ ಸ್ವಾಸ್ಥ್ಯದಿಂದಿರಲು ಸಾಧ್ಯ ಎಂದು ಡಾ. ತೇಜಸ್ವಿನ ಹಿರೇಮಠ ಅವರು ಹೇಳಿದರು. ನಗರದ ಶ್ರೀ ಕರಿಯಮ್ಮದೇವಿ ಮಹಿಳಾ ಮಂಡಳವು ಆಚರಿಸಿದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿ, ಮಹಿಳೆ ಸ್ವಾಭಿಮಾನದಿಂದ ಬದುಕಬೇಕು ಹಾಗೂ ತನ್ನ ಆರೋಗ್ಯದ ಕಡೆಗೆ ವಿಶೇಷ ಗಮನಹರಿ ಸಬೇಕೆಂದು ಹೇಳುತ್ತಾ ಆರೋಗ್ಯ ಸಲಹೆಗಳನ್ನು ಮತ್ತು ಈಗಿನ ಮುಂದುವರೆದ ವೈದ್ಯಕೀಯ ಚಿಕಿತ್ಸೆಗಳ ಬಗ್ಗೆ ವಿವರಿಸಿದರು. ಅನಿತಾ ಜಕಬಾಳ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಇಂದಿನ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ಯಶಸ್ಸನ್ನು ಸಾಧಿಸಿದ್ದಾರೆ ಎಂದರು.ಸಭೆಯ ಅಧ್ಯಕ್ಷತೆಯನ್ನು ವಹಿಸಿದ ರೇಣುಕಾ ಕೇಸರಿ ಅವರು ಸಾಧನೆಗೈದ ಡಾ. ಸಂಗೀತ ಹುಡೇದ, ಡಾ. ಅನುಶ್ರೀ ಕಳ್ಳಿ ಹಾಗೂ ಸಂಜನಾ ಭಗವತಿ ಅವರನ್ನು ಸನ್ಮಾನಿಸಿ, ಸಂಘದ ಸದಸ್ಯರ ಸಹಕಾರವು ಸಂಘದ ಯಶಸ್ವಿಗೆ ಮತ್ತಷ್ಟು ಬಲವನ್ನು ತಂದಿದೆ ಎಂದರು. ವಿಜಯಲಕ್ಷ್ಮಿ ಭಗವತಿಯವರ ನೇತೃತ್ವದಲ್ಲಿ ಮಹಿಳೆಯರು ಫ್ಯಾಶನ್ ಶೋ ಮಾಡಿದರು. ಅಕ್ಕಮಹಾದೇವಿ ಕಳ್ಳಿ ಅವರು ಕೊರವಂಜಿ ಪಾತ್ರವನ್ನು ಸೊಗಸಾಗಿ ನಿರ್ವಹಿಸಿದರು. ಶಾಂತಾ ಗೌಡರ ಹಾಗೂ ಗಂಗವ್ವ ನರ್ತಿಯವರು ವೀರ ಮಹಿಳೆಯರ ಪಾತ್ರ ನಿರ್ವಹಿಸಿದರು. ವಿವಿಧ ಆಟಗಳನ್ನು ಆಡಿಸಿ ಮಹಿಳೆಯರನ್ನು ರಂಜಿಸಿದರು.ಕಾರ್ಯಕ್ರಮವು ಶಿವಲೀಲಾ ಅಡವಿ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಪದ್ಮಾವತಿ ವಾಲಿಕಾರ ಅವರು ಅತಿಥಿಗಳನ್ನು ಪರಿಚಯಿಸಿ ಸ್ವಾಗತಿಸಿದರು. ಶ್ರೀದೇವಿ ಗುಡ್ಲಾನೂರ ಪುಷ್ಪಾರ್ಪಣೆಗೈದರು. ಅನ್ನಪೂರ್ಣಾ ಹುಳ್ಳಿ ಹಾಗೂ ಸುರೇಖಾ ಕುರಿಯವರು ತಮ್ಮ ಅನಿಸಿಕೆಗಳನ್ನು ಹೇಳಿದರು. ಗಂಗಾ ಚಕ್ರಣ್ಣವರ ಹಾಗೂ ಅನ್ನಪೂರ್ಣ ದೇವರವರ ಮಹಿಳೆಯ ದೀಮಂತಿಕೆಯ ಹಾಡನ್ನು ಹೇಳಿದರು. ಶೀಲಾ ಹೆಬಸೂರರವರು ಕಾರ್ಯಕ್ರಮವನ್ನು ನಿರೂಪಿಸಿದರು. ಶಶಿಕಲಾ ಗುರಿಕಾರ, ಜಯಲಕ್ಷ್ಮಿ ಡೊಳ್ಳಿನವರು ಅಲ್ಪೋಪಹಾರದ ವ್ಯವಸ್ಥೆಯನ್ನು ಮಾಡಿದರು. ನೇತ್ರಾವತಿ ಕೊತ್ತಲನ್ನವರ ವಂದಿಸಿದರು.



ಬಳ್ಳಾರಿ ಮಾ : ಬಳ್ಳಾರಿಯ ಅನಾದಿ ಲಿಂಗೇಶ್ವರ ದೇವಸ್ಥಾನದ ಬಳಿ ಸಂಜೆ ಭೀಮನೇನಿ ಕುಟುಂಬ ಹಾಗೂ ಅವರ ಸ್ನೇಹಿತರ ಬಳಗದವತಿಯಿಂದ ದೇವಸ್ಥಾನಕ್ಕೆ ಆಗಮಿಸುವ ಭಕ್ತರಿಗೆ ಶಿವರಾತ್ರಿ ಪ್ರಯುಕ್ತ ಲಘು ಪ್ರಸಾದ (ಕಡ್ಲೆಕಾಳು) ಸಂಜೆ 5 ಗಂಟೆಯಿಂದ ರಾತ್ರಿ 9 ಗಂಟೆಯವರಗೆ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪಾಲಿಕೆಯ ಮಾಜಿ ಮೇಯರ್ ರಾಜೇಶ್ವರಿ ಸುಬ್ಬರಾಯಿಡು, ಭೀಮನೇನಿ ಪ್ರಸಾದ್,ಭಾಸ್ಕರ್,ಕಿಲ್ಟಯ್ಯ, ಶಿವಕುಮಾರ್, ಕಂಟ್ಮನೇನೀ ರಾಮು, ಕೇಕ್ ವೆಂಕಟೇಶ್ವರ ರಾವ್, ಜಿ.ನರೇಂದ್ರ, ಚಿತ್ತರಂಜನ್, ಕೊನಂಕಿ ಶೀನಪ್ಪ, ರಾಜಶೇಖರ್, ದೇವೇಂದ್ರ ಸ್ವಾಮಿ ಇನ್ನಿತರರು ಭಾಗವಹಿಸಿದ್ದರು.

# ಮಸಗುಪ್ಪಿಯಲ್ಲಿ ಸಂಭ್ರಮದಿಂದ ಜರುಗಿದ ಶ್ರೀ ಸಿದ್ಧಾರೂಢ ರಥೋತ್ಸವ



ಮೂಡಲಗಿ: ತಾಲೂಕಿನ ಮಸಗುಪ್ಪಿ ಗ್ರಾಮದಲ್ಲಿ ಶ್ರೀ ಸಿದ್ಧಾರೂಢ ಜಾತ್ರಾ ಮಹೋತ್ಸವ ಅಂಗವಾಗಿ ಮೂರನೇ ವರ್ಷದ ಸಿದ್ಧಾರೂಢರ ರಥೋತ್ಸವ ರವಿವಾರದಂದು ಸುಣಧೋಳಿಯ ಶ್ರೀ ಶಿವಾನಂದ ಮಹಾಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಸಡಗರ ಸಂಭ್ರಮದಿಂದ ಜರುಗಿತು.

ಜಾತ್ರಾಮಹೋತ್ಸವ ಅಂಗವಾಗಿ ರವಿವಾರ ಮುಂಜೆ ಶ್ರೀ ಮಠದ ಅರ್ಚಕರಾದ ಚಂದ್ರಯ್ಯಾ ಹಿರೇಮಠ ಅವರು ಶ್ರೀ ಸಿದ್ಧಾರೂಢರ ಮೂರ್ತಿಗೆ ಅಭಿಷೇಕ, ವಿಶೇಶ ಪೂಜೆ ಹಾಗೂ ಅಲಂಕಾರ ನೆರವೇರಿಸಿದರು, ಮಸಗುಪ್ಪಿ ಹಾಗೂ ಸುತ್ತಮೂತಲ್ಲಿನ ವಿವಿಧ ಗ್ರಾಮದ ಭಕ್ತರು ದರ್ಶನ ಪಡೆದರು. ಸಂಜೆ ಸುಣಧೋಳಿಯ ಶ್ರೀ ಶಿವಾನಂದ ಶ್ರೀಗಳು ರಥೋತ್ಸವಕ್ಕೆ ಪೂಜೆಸಲ್ಲಿಸಿದ ಅಪಾರಜನಸ್ತೋಮ ಮಧ್ಯೆ ರಥೋತ್ಸವ ಶ್ರೀ ಸಿದ್ಧಾರೂಢ ಮಠದಿಂದ ಶ್ರೀ ಮಹಾಲಕ್ಷ್ಮೀ ದೇವಸ್ಥಾನ ಆವರಣದವರಿಗೆ ಸಾಗಿ ಮರಳಿ ಶ್ರೀ ಮಠಕ್ಕೆ ಆಗಮಿಸಿತು. ರಥೋತ್ಸವ ಸಂಧರ್ಭದಲ್ಲಿ ಭಕ್ತರು ಬೆಂಡು, ಬಾಳೆಹಣ್ಣು ಸಮರ್ಪಿಸಿ ಪುನತರಾದರ.

# ಜನರ ಭಕ್ತಿ ಇರುವ ವರೆಗೆ ಮಠ ಮಾನ್ಯಗಳು ಇರುತ್ತವೆ



ಮೂಡಲಗಿ: 'ಜನರ ಭಕ್ತಿ ಇರುವ ವರೆಗೆ ಮಠ ಮಾನ್ಯಗಳು ಇರುತ್ತವೆ. ಅಂತರಂಗದ ಸಿರಿವಂತ ಇದ್ದರೆ ಬಹಿರಂಗದ ಸಿರಿವಂತಿಕ ತಾನಾಗಿಯೇ ಬರುತ್ತದೆ. ಬದುಕನ್ನು ಆನಂದವಾ ಗಿಸಿಕೊಳ್ಳುವಲ್ಲಿ ಅಂತರಂಗದ ಸಿರಿವಂತಿಕೆ ವೃದ್ಧಿಸಿಕೊಳ್ಳುವುದು ಅವಶ್ಯವಿದೆ' ಎಂದು ಹೊನಕುಪ್ಪಿಯ ಚಂದ್ರಮ್ಮಾದೇವಿ ಕೈವಲ್ಯಮಠದ ಶರಣ ಬಸಪ್ಪ ಅಜ್ಜನವರು ಹೇಳಿದರು.

ತಾಲ್ಲೂಕಿನ ಹೊನಕುಪ್ಪಿಯ ಚಂದ್ರಮ್ಮಾದೇವಿ ಜಾತ್ರೆಯ ಅಂಗವಾಗಿ ಭಾನುವಾರ ಏರ್ಪಡಿಸಿದ್ದ ಹತ್ತನೆಯ ಸತ್ಸಂಗ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಮಾತನಾಡಿದ ಅವರು ಮಠದ ಭಕ್ತರ ಪ್ರೀತಿ, ವಿಶ್ವಾಸದಲ್ಲಿ ಸಮಾಜಮುಖಿಯಾಗಿ ನಾಡಿನ ಶ್ರೇಷ್ಠ ಮಠವನ್ನಾಗಿಸುವ ಉದ್ದೇಶ ನನ್ನದಾಗಿದೆ ಎಂದರು.

ತಳಕಟ್ನಾಳದ ಸಿದ್ಧಾರೂಢ ಮಠದ ಅತ್ಮಾನಂದ ಸ್ವಾಮಿಗಳು ಮಾತನಾಡಿ ಹೊನಕುಪ್ಪಿಯ ಚಂದ್ರಮ್ಮಾದೇವಿ ಜಾತ್ರೆಯು ಕೇವಲ ಜನರ ಜಾತ್ರೆಯಾಗಿಲ್ಲ. ಇದು ಜ್ಞಾನ ಬಿತ್ತುವ ಜಾತ್ರೆಯಾಗಿದೆ. ಐದು ದಿನಗಳ ವರೆಗೆ ನಿತ್ಯ ಸತ್ಸಂಗ, ಶರಣರ ಮಾತುಗಳಿಂದ ಜ್ಞಾನದ ಜಾತ್ರೆಯಾಗಿದೆ ಎಂದರು.

ಗೋಕಾಕ ಫಾಲ್ಸ್‌ನ ಬಸವರಾಜ ಶರಣರು ಮಾತನಾಡಿ ದಯಾ ಮತ್ತು ಕುರುಣೆ ಎರಡೂ ಒಂದೇ ಎನಿಸಿದರೂ ಎರಡೂ ಭಿನ್ನವಾಗಿವೆ. ದಯಾ ಕಾರ್ಯೋನ್ಮುಖವಾಗುವ ಸ್ಥಿತಿಗೆ ಕರುಣೆ ಎನಸುವುದು, ಗುರುವಿಗೆ ಕೇವಲ ವಿದ್ಯೆ, ಜ್ಞಾನವಿದ್ದರೆ ಸಾಲದು ಅದನ್ನು ತನ್ನ ಶಿಷ್ಯರಿಗೆ ಅರಿವು ಮೂಡಿಸಿ ಸನ್ಮಾರ್ಗದಲ್ಲಿ ನಡೆಸಿದಾಗ ಗುರು ತನ್ನ ಶ್ರೇಷ್ಠತೆಯನ್ನು ಮರೆಯುತ್ತಾನ ಎಂದರು. ಕಪರಟ್ಟಿಯ ಗುರು ಮಹಾದೇವಾಶ್ರಮದ ಬಸವರಾಜ ಸ್ವಾಮಿಗಳು ಮಾತನಾಡಿ ಹೊನಕುಪ್ಪಿಯ ಚಂದ್ರಮ್ಮಾದೇವಿ ಕೈವಲ್ಯ ಮಠದ ಬಸಪ್ಪ ಅಜ್ಜನವರು ಮಠವನ್ನು ಆಧ್ಯಾತ್ಮಿಕ ತಳಹದಿಯಲ್ಲಿ ಭಕ್ತಿಪಥದಲ್ಲಿ ಬೆಳೆಸುತ್ತಿರುವುದು ಶ್ಲಾಘನೀಯವಾಗಿದೆ. ಸರ್ವಜನರ ಭಾವೈಕ್ಯತೆಯ ಮೇಳವಾಗಿದೆ ಎಂದರು.

ಗೋಕಾಕದ ಶಾಮಾನಂದ ಆಶ್ರಮದ ಶಂಕರಾನಂದ ಸ್ವಾಮಿಜಿ, ಜೋಕಾನಟ್ಟಿಯ ಯೋಗಿಸಿದ್ದೇಶ್ವರ ಆಶ್ರಮದ ಬಿಳಿಯಾನಸಿದ್ಧ ಸ್ವಾಮಿಜಿ ಮಾತನಾಡಿದರು.

ನವೃತ್ತ ಗ್ರಾಮದ ಶಿಕ್ಷಕರಾದ ಆರ್.ಬಿ. ಗಂಗರಡ್ಡಿ, ಎಸ್.ಎಂ. ನದಾಫ್, ಎಸ್.ಬಿ. ಬೆಣಚಿನಮರಡಿ ಅವರನ್ನು ವೇದಿಕೆಯಲ್ಲಿ ಸನ್ಮಾನಿಸಿದರು.

ಬೆಳಿಗ್ಗೆ ದೇವಿ ಸನ್ನಿಧಿಗೆ ವಿಶೇಳ ಪೂಜೆ ಜರುಗಿತು, ಮುತ್ತೈದಿಯರಿಗೆ ಉಡಿ ತುಂಬಿದರು. 25ಕ್ಕೂ ಅಧಿಕ ಹೊನಕುಪ್ಪಿ ಸೇರಿದಂತೆ ವಿವಿಧ ಗ್ರಾಮಗಳ ದೇವರುಗಳ ಪಲ್ಲಕ್ಕಿ ಉತ್ಸವವು ಭಕ್ತಿಭಾವದಲ್ಲಿ ಜರುಗಿತು.

ಹೊನಕುಪ್ಪಿ ಸರಕಾರಿ ಪ್ರೌಢ ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿ ಸ್ವಾಗತ ಗೀತೆ ಪ್ರಸ್ತುತಪಡಿಸಿದರು. ಶಿಕ್ಷಕರಾದ ಆರ್.ಎಂ.ತಳವಾರ ಪ್ರಾಸ್ತಾವಿಕವಾಗಿ ಮಾತನಾಡಿದರು, ಜಿ.ಎಂ.ಕರಿಗಾರ ಮತ್ತು ಮುತ್ತು ಸಿದ್ದರಡ್ಡಿ ನಿರೂಪಿಸಿದರು, ವಿಠ್ಠಲ ಅಮನ ವಂದಿಸಿದರು.

# ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ವೈಜ್ಞಾನಿಕ ಮನೋಭಾವನೆ ಮೂಡಿಸುವ ಕಾರ್ಯಕ್ರಮ

ಬೆಳಗಾವಿ;– ಜಯಭಾರತ ಫೌಂಡೇಶನ,ಬೆಳಗಾವಿ, ಮಹಿಳಾ ಕಲ್ಯಾಣ ಸಂಸ್ಥೆ,ಬೆಳಗಾವಿ ಹಾಗೂ ಚಂದ್ರಗಿರಿ ಶಿಕ್ಷಣ ಮಹಾವಿದ್ಯಾಲಯ, ಬೆಳಗಾವಿ ಇವರ ಸಹಯೋಗದಲ್ಲಿ ಮಂಗಳವಾರ ಮಾರ್ಚ 12 ರಂದು ಚಂದ್ರಗಿರಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ವೈಜ್ಞಾನಕ ಮನೋಭಾವನೆ ಮೂಡಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಂದ್ರಗಿರಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಎ ಎಲ್ ಪಾಟೀಲ ವಹಿಸುವರು ಮುಖ್ಯ ಅತಿಥಿಗಳಾಗಿ ಚಿಕ್ಕೋಡಿಯ ರಾಷ್ಟ್ರಪ್ರಶಸ್ತಿ ವಿಭೂಷಿತ ನವೃತ್ತ ಶಿಕ್ಷಕರಾದ ಎಸ್ ಆರ್ ಡೊಂಗರೆ, ವಿಜಯಪೂರ ಜಿಲ್ಲೆಯ ಗಣಿ ಸರಕಾರಿ ಪದವಿಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯರಾದ ಬಿ ಎಸ್ ವಜ್ರದ, ಜಯಭಾರತ ಫೌಂಡೇಶನದ ಬಸನಗೌಡಾ ಪಾಟೀಲ,ದಯಾನಂದ ಕದಮ ಆಗಮಿಸುವರು ಎಂದು ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ವೈಜಯಂತಿ ಚೌಗಲಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ಗುರು ನಮನ ಮಹೋತ್ಸವ ಕಾರ್ಯಕ್ರಮ




ಮೂಡಲಗಿ : ಮುಂದೆ ಬರುವಂತಹ ಪೀಳಿಗೆಗೆ ಅಂತ್ಯಂತ ನೆಮ್ಮದಿಯ ಬದುಕನ್ನು ಸಾಗಿಸಬೇಕಾದರೆ ಒಂದಿಷ್ಟು ಆಧ್ಯಾತ್ಮಿಕ ಮನೋಭಾವನೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅವಶ್ಯಕತೆ ಇದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹೇಳಿದರು.

ಶನಿವಾರ ತಾಲೂಕಿನ ವಡೇರಹಟ್ಟಿ ಗ್ರಾಮದ ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳ ಆಶ್ರಮದಲ್ಲಿ ಆಯೋಜಿಸಿದ ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳ, ಪೂಜ್ಯ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳ ಹಾಗೂ ಜ್ಞಾನಯೋಗಿ ಪೂಜ್ಯ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ಗುರು ನಮನ ಮಹೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು.

ನಡೆದಾಡುವ ದೇವರೆಂದೇ ಪ್ರಸಿದ್ಧರಾದ ವಿಜಯಪುರ ಜ್ಞಾನಯೋಗಾಶ್ರಮದ ಪರಮಪೂಜ್ಯ ಸಿದ್ದೇಶ್ವರ ಶ್ರೀಗಳು ತಮ್ಮ ಜೀವನದುದ್ದಕ್ಕೂ ಸಮಾಜದ ಏಳಿಗೆಗಾಗಿ ಶ್ರಮಿಸಿ, ಸಮಾಜಕ್ಕೆ ಮಾದರಿಯಾಗಿ ಲಕ್ಷಾಂತರ ಜನರಿಗೆ ದಾರಿದೀಪವಾದ ದಿವ್ಯ ಚೇತನರಾಗಿದ್ದಾರೆ. ಜ್ಞಾನ ದಾಸೋಹದ ಮೂಲಕ ನಮ್ಮೆಲ್ಲರ ಬದುಕನ್ನು ಪರಿವರ್ತನೆ ಮಾಡಿ ಅವರ ಬೆಳಕನ್ನು ಚೆಲ್ಲಿದ್ದು, ಪ್ರತಿಯೊಂದು ಜೀವಿಗಳಲ್ಲಿ ಅವರ ಆದರ್ಶಗಳನ್ನು, ತತ್ವಗಳನ್ನು ಪಾಲಿಸಿ, ಅಪರೂಪದ ಸಂತರೆಂದು ಅವರ ಬದುಕಿನ ಗುಣದಾನ ಮಾಡಿ ಭಕ್ತಿಯಿಂದ ಸ್ಮರಿಸಿದರು.

ಮನುಷ್ಯನ ಸ್ವಭಾವವನ್ನು ಒಂದೇ ಸಲ ತಿದ್ದಲು ಸಾಧ್ಯವಿಲ್ಲ. ಪ್ರತಿನಿತ್ಯ ಪ್ರವಚನ, ಆಧ್ಯಾತ್ಮಿಕ ಚಟುವಟಿಕಗಳಿಗೆ ನಮ್ಮನ್ನು ನಾವೇ ತೋಡಗಿಸಿಕೊಳ್ಳುವುದರ ಮುಖಾಂತರ ಪೂಜ್ಯರು ಹೇಳಿದ ಮಾತನ್ನು ನಮ್ಮ ವೈಯಕ್ತಿಕ ಬದುಕಿಗೆ ಅಳವಡಿಸಿಕೊಳ್ಳುವ ಮೂಲಕ ಒಂದು ಸ್ವಲ್ಪ ಬದಲಾವಣೆಯಾಗಲಿಕ್ಕೆ ಸಾಧ್ಯವಿದೆ. ಗುರುವಿನ ಕೃಪೆಗೆ ಪಾತ್ರರಾಗಬೇಕಾದರೇ ಪೂಜ್ಯರುಗಳು ಮಾಡಿಹೊದ ಕೆಲಸಗಳನ್ನು ನಮ್ಮ ಜೊತೆಗೆ ಇವೆ. ಆ ಪರಂಪರೆಯನ್ನು ಮುಂದುವರಿಸುವಂತಹ ಕಾರ್ಯವನ್ನು ನಾವೆಲ್ಲರೂ ಸೇರಿ ಮಾಡೋಣ ಪ್ರತಿ ವರ್ಷವು ಕೂಡಾ ಗುರು ನಮನ ಮಹೋತ್ಸವ ಕಾರ್ಯಕ್ರಮ ಯಶಸ್ವಿಯಾಗಲಿ ನಡೆಯಲಿ ನಮ್ಮ ಬದುಕಿನಲ್ಲಿ ಒಂದಿಷ್ಟು ಬದಲಾವಣೆ ತರಲಿ ಎಂದರು.

ಈ ಸಂದರ್ಭದಲ್ಲಿ ಪೂಜ್ಯಶ್ರೀ ಮಹೇಶಾನಂದ ಮಹಾಸ್ವಾಮಿಗಳು ಪೂಜ್ಯಶ್ರೀ ಷಡಕ್ಷರಿ ಮಹಾಸ್ವಾಮಿಗಳು, ನಾರಾಯಣ ಸ್ವಾಮಿಗಳು ಸಾನಿಧ್ಯ ವಹಿಸಿದ್ದರು.

ಪ್ರಮುಖರಾದ ಮಾರುತಿ ತೋಳಮರಡಿ, ಹಾಲಪ್ಪ ಮಳಿವಡೇರ, ಮಾರುತಿ ಪೂಜೇರಿ, ಭಗವಂತ ಧರ್ಮಟ್ಟಿ, ಶಂಕರ ಧರ್ಮಟ್ಟಿ ಸೇರಿದಂತೆ ಸ್ಥಳೀಯ ಮುಖಂಡರು, ಆಶ್ರಮದ ಭಕ್ತಾಧಿಗಳು ಉಪಸ್ಥಿತರಿದ್ದರು.